ವಿಶೇಷ ಶಿಕ್ಷಣದಲ್ಲಿ ಕುಟುಂಬ, ಶಾಲೆ ಮತ್ತು ಸಮುದಾಯದ ಪಾತ್ರ

ಉಷಾ ಮದನ್

ಸರಿಯಾಗಿ ಹೇಳುವುದಾದರೆ ಶಿಕ್ಷಣವು ವಿದ್ಯಾರ್ಥಿಗಳ ಬೌದ್ಧಿಕ ಮತ್ತು ಭಾವನಾತ್ಮಕ ಕೌಶಲಗಳನ್ನು ಬೆಳೆಸಿ, ಅಂತಿಮವಾಗಿ ಜಗತ್ತಿನ ಸವಾಲುಗಳನ್ನು ಎದುರಿಸುವುದಕ್ಕೆ ಅವರಲ್ಲಿ ಉತ್ತಮ ಜೀವನ ಕೌಶಲಗಳನ್ನು ವೃದ್ಧಿಗೊಳಿಸಬೇಕು. ವಿದ್ಯಾಭ್ಯಾಸ, ವಿದ್ಯಾರ್ಥಿಯನ್ನು ಅರ್ಥಪೂರ್ಣ ಬದುಕಿಗೆ, ಅದರ ಜೊತೆಗೇ ಉತ್ಪಾದಕ ಕೆಲಸದ ಬದುಕಿಗೂ ಸಜ್ಜುಗೊಳಿಸಬೇಕು.

ದುರದೃಷ್ಟವಶಾತ್, ಪ್ರಸ್ತುತ ಶಿಕ್ಷಣದ ಪರಿಕಲ್ಪನೆಯು ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ಪೋಷಕ ಎನ್ನುವುದರ ಬದಲು ಮಾಹಿತಿ ಪಡೆಯುವುದರ ಮೂಲಕ ಹೆಚ್ಚಿನ ಶೈಕ್ಷಣಿಕ ವಿಕಾಸ ಎನ್ನುವ ರೀತಿಯಾಗಿದೆ. ಶಿಕ್ಷಣವು ಮಕ್ಕಳ ಸಾಮರ್ಥ್ಯಗಳನ್ನು ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಬಳಸಿ ಬದುಕಿನ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸುವ ತರಬೇತಿ ನೀಡಬೇಕಾಗಿದೆ. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಈ ಕೇಂದ್ರಗಮನವನ್ನು ಬದಿಗೆ ಸರಿಸಲಾಗಿದೆ. ಬಹುತೇಕ ಎಲ್ಲ ಮುಖ್ಯವಾಹಿನಿಯ ಮಕ್ಕಳು ಹೇಗೋ ಕೆಲವು ಹಂತದವರೆಗೆ, ನೋಡುವ, ಕೇಳುವ, ಅನುಭವಿಸುವ, ವಿಶ್ಲೇಷಿಸುವ ಮತ್ತು ತಮ್ಮ ಸುತ್ತಮುತ್ತಲಿನ ಪರಿಸರ ನಿರೀಕ್ಷಿಸುವ ಕೆಲಸ ಮಾಡುತ್ತಾ ಇಂತಹ ಆತ್ಮವಿಶ್ವಾಸದ ತರಬೇತಿ ಪಡೆದು ಬೆಳೆದಿರುತ್ತಾರೆ. ಹಾಗೆ, ಅವರೆಲ್ಲ ಬದುಕಿನ ಕೌಶಲಗಳ ಸ್ವಯಂ ತರಬೇತಿಯನ್ನು ಹೊಂದಿರುತ್ತಾರೆ. ದುರದೃಷ್ಟವಶಾತ್, ಬೌದ್ಧಿಕ ನ್ಯೂನತೆ ಇರುವ ಮಕ್ಕಳಲ್ಲಿ ಇಂತಹ ಕೌಶಲಗಳ ಕೊರತೆ ಇರುತ್ತದೆ. ಹೀಗಾಗಿ ಜೀವನ ಕೌಶಲಗಳಿಗೆ ಹೆಚ್ಚಿನ ಗಮನ ಕೊಟ್ಟು ದೈಹಿಕ ಚಲನಾ (Motor) ಕೌಶಲ, ಬೌದ್ಧಿಕ ಮತ್ತು ಭಾವನಾತ್ಮಕ ತರಬೇತಿಯನ್ನು ಸೂಕ್ತ ಸಮಯದಲ್ಲಿ ಅವರಿಗೆ ಕೊಡಬೇಕಾದದ್ದು ಅಗತ್ಯ. ಕ್ರಿಯಾತ್ಮಕ ಶಿಕ್ಷಣ ಮತ್ತು ವೃತ್ತಿ ಕೌಶಲ ತರಬೇತಿಯನ್ನೂ ನೀಡಬೇಕಾಗಿದೆ.

ಹೀಗಿದ್ದರೂ, ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಸುಶಿಕ್ಷಿತರನ್ನಾಗಿಸುವ ವಿಚಾರಕ್ಕೆ ಬಂದರೆ ಇಲ್ಲೊಂದು ನಿರಾಶದಾಯಕ ವಾಸ್ತವ ಇದೆ. ಅದೆಂದರೆ ಕುಟುಂಬ ಮತ್ತು ಸಮುದಾಯ ಸದಸ್ಯರು ಅವರ ಶೈಕ್ಷಣಿಕ ಪ್ರಗತಿಯನ್ನು ಇತರ ಮುಖ್ಯವಾಹಿನಿಯ ವಿದ್ಯಾರ್ಥಿಗಳೊಂದಿಗೆ ಹೋಲಿಸಿ ನೋಡುತ್ತಾರೆ. ಮಗು ಶಿಕ್ಷಣಕ್ಕೆ ಸಜ್ಜಾಗಿದೆಯೇ ಅಥವಾ ಆ ಮಗುವಿನ ಅಗತ್ಯಗಳೇನೆನು ಎನ್ನುವುದನ್ನು ಅವರು ಗಮನಿಸುವುದಿಲ್ಲ. ಇಂತಹ ಸಂದರ್ಭದಲ್ಲಿ, ಆರಂಭಿಕ ಶಿಕ್ಷಣದ ಅತ್ಯುತ್ತಮ ಅಭ್ಯಾಸಗಳನ್ನು ಶೋಧಿಸುವ ಮುನ್ನ, ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಎಂದರೆ ಏನು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾದದ್ದು ಮುಖ್ಯ. ಕೇವಲ ಮಾಹಿತಿ ಮಾತ್ರ ಕಲೆ ಹಾಕುವ ಮುಖ್ಯವಾಹಿನಿಯ ಪಠ್ಯಕ್ರಮದ ಇನ್ನೊಂದು ಆವೃತ್ತಿ ಇದಾಗಬಾರದು.

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಇರುವ ಆದರ್ಶ ಶಿಕ್ಷಣದ ಕಾರ್ಯಕ್ರಮವು ಸ್ವತಂತ್ರ ಬದುಕು ಕಲ್ಪಿಸುವ ಆತ್ಯಂತಿಕ ಗುರಿಯನ್ನಿರಿಸಿಕೊಂಡು ಸಮಗ್ರ ಗಮನವನ್ನು ವಹಿಸಬೇಕಾಗಿದೆ. ಇದಕ್ಕಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತರಬೇತಿ ಶುರು ಮಾಡಬೇಕು. ಅವರ ಹದಿಹರೆಯ ಮತ್ತು ಪ್ರೌಢಾವಸ್ಥೆಯ ಬದುಕಿನ ಕೌಶಲಗಳಿಗೆ ಅದು ಅಡಿಪಾಯ ಆಗಿರಬೇಕು. ಅವರ ಸ್ವತಂತ್ರ ಬದುಕನ್ನು ಉನ್ನತಗೊಳಿಸುವ ಕೌಶಲಗಳನ್ನು ಕಲಿಸುವ ಕಡೆಗೆ ಹೆಚ್ಚಿನ ಗಮನ ನೀಡಬೇಕು. ಅನಂತರ ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ವೃತ್ತಿಪರ ತರಬೇತಿ ನೀಡಬೇಕು. ಹಾಗೆ ಮಾಡುವುದರಿಂದ ವಿದ್ಯಾರ್ಥಿಗಳು ನೌಕರಿಗೆ ಅರ್ಹರಾಗುತ್ತಾರೆ ಮತ್ತು ಆರ್ಥಿಕವಾಗಿ ಸ್ವತಂತ್ರರಾಗುತ್ತಾರೆ. ಮಗುವಿಗೆ ಸ್ವಾವಲಂಬನೆಯ ತರಬೇತಿ ಕೊಡದೇ ಇರುವುದಕ್ಕೆ ಯಾವುದೇ ವಿಕಲತೆಯೂ ಕಾರಣ ಆಗಿರಬಾರದು. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸೂಕ್ತ ಶಿಕ್ಷಣ ಪಡೆಯುವ ಎಲ್ಲ ಅವಕಾಶವನ್ನೂ ನೀಡಬೇಕು. ಅದರಲ್ಲಿ ಯಾವುದೇ ಮಿತಿ ಇರಬಾರದು ಮತ್ತು ಅವರ ಸಾಮರ್ಥ್ಯ ಮತ್ತು ಅಗತ್ಯಗಳಿಗೆ ತಕ್ಕಂತೆ ತರಬೇತಿ ನೀಡಬೇಕು. ಹಾಗಾದರೆ ಮಾತ್ರ ಅವರ ನ್ಯೂನತೆಗಳ ಹೊರತಾಗಿಯೂ ಸೂಕ್ತ ಉದ್ಯೋಗಾರ್ಹತೆ ಜೊತೆಗೆ ಸ್ವತಂತ್ರವಾಗಿ ಬದುಕುವ ಸಾಮರ್ಥ್ಯವನ್ನು ಬೆಳೆಸುವುದು ಸಾಧ್ಯ. ವಿಶೇಷ ಶಿಕ್ಷಣ ಸಬಲೀಕರಣಗೊಳಿಸುವಂಥದ್ದಾಗಿರಬೇಕು (ಹಾಗಿದ್ದರೆ ಮಾತ್ರ ಅವರು, ಸಾಮಾನ್ಯ ಪ್ರಕರಣದಲ್ಲಿ ಇರುವಂತೆ ಕುಟುಂಬಗಳಿಗೆ ಅಥವಾ ಸಮಾಜಗಳಿಗೆ 'ಹೊರೆ' ಎಂದು ಅನ್ನಿಸಲಾರರು).

ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಶಿಕ್ಷಿತರನ್ನಾಗಿಸುವುದರಲ್ಲಿ ಮೂರು ಮೂಲಭೂತ ಘಟಕಗಳವೆ: ಶಾಲೆ, ಕುಟುಂಬ ಮತ್ತು ಸಮಾಜ. ಇವು ಪರಸ್ಪರ ಪೂರಕ ನೆಲೆಯಲ್ಲಿ ಇರುತ್ತಾ ನಿಸ್ಸಂದೇಹವಾಗಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಈ ಮೂರೂ ಘಟಕಗಳು ಒಟ್ಟಾದರೆ ಸ್ವೀಕಾರ, ಗೌರವ ಮತ್ತು ಸ್ಥಾನ ಪಡೆಯುವ ಮಹತ್ವದ ಗುರಿಗಳನ್ನು ಸಾಧಿಸುವುದು ನಿಶ್ಚಿತ. ಇದು ಮುಂದೆ ವಿಶೇಷ ಶಿಕ್ಷಣ ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳ ಹಕ್ಕುಗಳ ಅಂತಿಮ ಗುರಿಯಾದ ಸಬಲೀಕರಣಕ್ಕೂ, ಸಮನ್ವಯತೆಗೂ ದಾರಿ.

ಕುಟುಂಬದ ಪಾತ್ರ

ಪ್ರಾಥಮಿಕ ಕಾಳಜಿ ವಹಿಸುವವರು ಹೆತ್ತವರು ಎನ್ನುವುದರಲ್ಲಿ ಯಾರಿಗೂ ತಕರಾರು ಇರಲಾರದು. ಹೆತ್ತವರ ಬದುಕಿನ ಗುರಿ ಎಂದರೆ ತಮ್ಮ ಮಕ್ಕಳು ಸ್ವತಂತ್ರವಾಗಿ ತಮ್ಮ ಪಾಡಿಗೆ ತಾವು ಅರಳಬೇಕೆನ್ನುವುದೇ ಆಗಿರುತ್ತದೆ. ವಿಶೇಷ ಅಗತ್ಯವುಳ್ಳ ಮಕ್ಕಳ ನ್ಯೂನತೆಗಳ ಕುರಿತು ಕುಟುಂಬದವರ ತಿಳುವಳಿಕೆ, ಒಡಹುಟ್ಟಿದವರ ಬೇಷರತ್ತಿನ ಸ್ವೀಕೃತಿ ಅವರ ಒಳಗೊಳ್ಳುವಿಕೆ ಇವೆಲ್ಲ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸೃಜನಾತ್ಮಕ ಶಿಕ್ಷಣ/ತರಬೇತಿ ನೀಡುವಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಶಾಲೆ ಮತ್ತು ಇತರ ಚಿಕಿತ್ಸೆಗಳು ತರಬೇತಿ ಪ್ರಕ್ರಿಯೆಗೆ ಪೂರಕವಾಗಿರುವಾಗ ಹೆತ್ತವರ ಮತ್ತು ಕುಟುಂಬದವರ ಪೂರ್ಣ ರೂಪದ ಒಳಗೊಳ್ಳುವಿಕೆ ಅತ್ಯಂತ ಮಹತ್ವದ್ದಾಗಿರುತ್ತದೆ. ಇದು ಪ್ರತಿ ಮಗುವಿನ ಗುರಿ ಸಾಧನೆಯ ಸಾಮರ್ಥ್ಯಕ್ಕೆ ಅತ್ಯಗತ್ಯ. ಕುಟುಂಬದ ಬೆಂಬಲ ಇರುವ ಮಗು ಸ್ವತಂತ್ರವಾಗುವ ಮತ್ತು

ಸೃಜನಶೀಲವಾಗುವ ಯಾವುದೇ ಬಗೆಯ ತರಬೇತಿಯಲ್ಲಿ ಯಶಸ್ವಿಯಾಗುತ್ತದೆ ಎನ್ನುವುದಕ್ಕೆ ಸಾಕಷ್ಟು ಸಾಕ್ಷ್ಯಗಳು ಸಿಗುತ್ತವೆ.

ಸಮುದಾಯದ ಪಾತ್ರ

ವಿಶೇಷ ಅಗತ್ಯವುಳ್ಳ ಮಗುವಿನ ಹೊಣೆಗಾರಿಕೆ ಕೇವಲ ಒಂದು ಕುಟುಂಬದ್ದಲ್ಲ ಎನ್ನುವುದನ್ನು ಆ ಮಗು ಬೆಳೆಯುತ್ತಿರುವ ಸಮಾಜ ಅರ್ಥೈಸಿಕೊಳ್ಳಬೇಕಾಗಿದೆ. ಸಮನ್ವಯ ಎನ್ನುವುದು ಸಾಮಾಜಿಕ ಜವಾಬ್ದಾರಿ. ಮಕ್ಕಳನ್ನು ಮೊದಲು ಮಕ್ಕಳೆಂದೇ ಭಾವಿಸಿ, ಅವರ ಜೀವನದ ಪ್ರತಿಯೊಂದು ಗತಿಯಲ್ಲೂ ಸಹಕಾರ, ಮನ್ನಣೆ ನೀಡುವ ನೆರೆಹೊರೆಯವರು ಮತ್ತು ಸಾರ್ವಜನಿಕರು ಇದ್ದಾಗ ಮಾತ್ರ ಇದು ಸಾಧ್ಯ. ನಮಗೆಲ್ಲ ಗೊತ್ತಿರುವ ಹಾಗೆ, ನಮ್ಮ ಮನೋವೃತ್ತಿ ಮತ್ತು ಕಲ್ಪನೆಗಳು ನಮ್ಮ ಕ್ರಿಯೆಯ ಮೇಲೆ ಪ್ರಭಾವ ಬೀರುತ್ತವೆ. ಹಾಗಾಗಿ ವಿಶೇಷ ಅಗತ್ಯವುಳ್ಳ ಮಗುವಿಗೆ ಪ್ರತಿಯೊಬ್ಬರೂ ನೆರವಾಗಬೇಕಾದದ್ದು ಅನಿವಾರ್ಯ. ಕುಟುಂಬದಿಂದ ಶಾಲೆಗಳಿಗೆ, ಕೊನೆಗೆ ಸಮಾಜದಲ್ಲಿ ಅವರಿಗೆ ಸ್ಥಾನಮಾನ ಸಲ್ಲುವವರೆಗಿನ ಚಲನೆಯಲ್ಲಿ ಈ ನೆರವು ಬೇಕೇಬೇಕು.

ಶಾಲೆಯ ಪಾತ್ರ

ವಿಶೇಷ ಸೌಲಭ್ಯ ನೀಡುವ ಅಥವಾ ಭಾಗಿದಾರೀ ವ್ಯವಸ್ಥೆ ಮಾಡುವ ಮೂಲಕವೋ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಪೊರೆಯುವ ಯಾವುದೇ ಶಾಲೆಯ ಮೂಲ ಉದ್ದೇಶ ಮಕ್ಕಳ ಸಮಗ್ರ ಬೆಳವಣಿಗೆಗೆ ಪೂರಕ ಕಲಿಕಾ ವಾತಾವರಣ ಒದಗಿಸುವುದಾಗಿರುತ್ತದೆ. ಅವರು ತಮಗೆಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಕುಟುಂಬ ಮತ್ತು ಸಮುದಾಯಗಳ ಜೊತೆಗೆ ಸಂಪರ್ಕದಲ್ಲಿರಬೇಕು ಮತ್ತು ಒಳಗೊಳ್ಳುವಂತೆ ಮಾಡಬೇಕು. ಪಠ್ಯಕ್ರಮವು ದೈಹಿಕ, ಭಾಷಿಕ, ಭಾವನಾತ್ಮಕ, ಬೌದ್ಧಿಕ ಮತ್ತು ಸಾಮಾಜಿಕ ಎಂಬ ಐದು ಅಭಿವೃದ್ಧಿ ವಲಯಗಳನ್ನು ಕೇಂದ್ರೀಕರಿಸಿ ವಿನ್ಯಾಸಗೊಂಡಿರಬೇಕು. ಅಲ್ಲಿ ಪ್ರತೀ ವಲಯದ ಆರಂಭದ ಹಂತದಿಂದ ನಿರೀಕ್ಷೆಯ (ಗುರಿಗಳು) ಹಂತದವರೆಗೆ ಪ್ರತಿಯೊಬ್ಬ ವಿದ್ಯಾರ್ಥಿಯ ಸಾಮರ್ಥ್ಯ ಮತ್ತು ಸವಾಲಿಗೆ ಅನುಗುಣವಾಗಿ ವೈಯಕ್ತಿಕ ಶಿಕ್ಷಣ ಯೋಜನೆ (Individual Education Plans-IEPs)ಯಲ್ಲಿ ಮೌಲ್ಯ–ಮಾಪನದ ಮಾನದಂಡಗಳು ಸ್ಪಷ್ಟವಾಗಿ ಮೂಡಿರಬೇಕು. ಅಗತ್ಯವಿರುವ ಚಿಕಿತ್ಸಾ ಪ್ರತಿಸ್ಪಂದನಗಳನ್ನು ಒಳಗೊಂಡಿರಬೇಕು.

ಸರ್ವತೋಮುಖ ವಿಧಾನ: ಮಂಡಲ

ಬೌದ್ಧಿಕ ನ್ಯೂನತೆಯುಳ್ಳ ಮಕ್ಕಳಿಗಾಗಿ ಇರುವ ಶಾಲೆ ದೀಪಿಕಾ ಇಂಥದ್ದೊಂದು ಸರ್ವತೋಮುಖ ವಿಧಾನ ಅನುಸರಿಸುತ್ತಿದೆ.. ಇಲ್ಲಿ ನಮ್ಮ ಬೋಧನೆಯ ಉದ್ದೇಶವು ಬೌದ್ಧಿಕ ನ್ಯೂನತೆಯ ಮಕ್ಕಳಿಗೆ ಸಾಧ್ಯವಾದಷ್ಟು ಸ್ವತಂತ್ರ ಬದುಕಿಗೆ ಸಜ್ಜಾಗುವ ತರಬೇತಿ ನೀಡುವುದೇ ಆಗಿದೆ.ನಮ್ಮಲ್ಲಿ 'ಮಂಡಲ' ಎನ್ನುವ ಅನುಷ್ಠಾನ ಯೋಗ್ಯ ವ್ಯವಸ್ಥಿತ ತರಬೇತಿ ಕಾರ್ಯಕ್ರಮ ಇದೆ. ಕಳೆದ ಹದಿನೈದು ವರ್ಷಗಳಿಂದ ಬೌದ್ಧಿಕ ನ್ಯೂನತೆಯ ಮಕ್ಕಳಿಗಾಗಿ ಅಭಿವೃದ್ಧಿಪಡಿಸಲಾಗುತ್ತಿರುವ ಮತ್ತು ಅನುಷ್ಠಾನಗೊಳಿಸಲಾಗುತ್ತಿರುವ ಶೈಕ್ಷಣಿಕ ಆವಿಷ್ಕಾರಗಳಲ್ಲಿ ಈ ತಂತ್ರವನ್ನು ಬಳಸುತ್ತಿದ್ದೇವೆ. ಇದು ಮಕ್ಕಳನ್ನು ಸ್ವತಂತ್ರವಾಗಿಸುವಲ್ಲಿ ಯಶಸ್ವಿಯಾಗಿದೆ ಎಂದು ಹೇಳುವುದಕ್ಕೆ ಸಂತೋಷವೆನಿಸುತ್ತದೆ. ಈವರೆಗಿನ ವಿಶೇಷ ಅಗತ್ಯವುಳ್ಳ ಮಕ್ಕಳ ಅವಲೋಕನ ಮತ್ತು ಅನುಭವದ ಆಧಾರದಲ್ಲಿ ಇಂತಹ ಸರ್ವತೋಮುಖ ವಿಧಾನವು ಈ ಹೊತ್ತಿನ ಅಗತ್ಯ ಎನ್ನುವುದನ್ನು ನಾವು ಮನಗಂಡಿದ್ದೇವೆ. ಇದು ಸ್ವತಂತ್ರವಾಗಿ ದೈನಂದಿನಜೀವನ ಕೌಶಲ, ಸಾಮಾಜಿಕ ಕೌಶಲ, ಸಂವಹನ ಕೌಶಲ, ಚಲನಾ ಕೌಶಲ, ಕ್ರಿಯಾತ್ಮಕ ಶಿಕ್ಷಣವನ್ನೂ ಒಳಗೊಂಡಿದೆ. ಜೊತೆಗೆ ವೃತ್ತಿಪರ ಕೌಶಲಗಳ ತರಬೇತಿಯೂ ಇರುತ್ತದೆ.

ಇಂಥದ್ದೊಂದು ಸಲಕರಣೆಯ ಮುಖ್ಯ ಉದ್ದೇಶ ಈಗಾಗಲೇ ಚರ್ಚೆ ಮಾಡಿದ ಮೂರು ಮುಖ್ಯ ಘಟಕಗಳನ್ನು ಗುರುತಿಸುವ, ವಿವರಿಸುವ, ಸಾಕ್ಷ್ಯ ಆಧಾರಿತ ಅಭ್ಯಾಸಗಳನ್ನು ಸಂಕ್ಷಿಪ್ತಗೊಳಿಸುವುದೇ ಆಗಿದೆ. ವಿಶೇಷ ಅಗತ್ಯವುಳ್ಳ ಮಕ್ಕಳ ಸರ್ವತೋಮುಖ ತರಬೇತಿಯ ಮೂರು ಘಟಕಗಳೆಂದರೆ ಶಾಲೆ, ಕುಟುಂಬ ಮತ್ತು ಸಮುದಾಯವೇ ಆಗಿದೆ. ಪ್ರತಿಗುಂಪಿನ ಮಕ್ಕಳ ಶೈಕ್ಷಣಿಕ ಉದ್ದೇಶಗಳನ್ನು ಈಡೇರಿಸುವುದಕ್ಕೆ ಇರುವ ಅಭ್ಯಾಸಗಳ ಜೋಡಿ ಇದರಲ್ಲಿವೆ.

ಇಲ್ಲಿ ನೀಡಲಾಗಿರುವ ಚಿತ್ರ ವ್ಯವಸ್ಥಿತ ಮಧ್ಯಸ್ಥಿಕೆಯ ನಿಯಮ ಮತ್ತು ಅಭ್ಯಾಸ ಪರಿಕಲ್ಪನೆಗಳನ್ನು ತೋರಿಸುತ್ತದೆ. ಈ ಮಧ್ಯಸ್ಥಿಕೆಯು ತರಬೇತಿದಾರ ನಿರ್ದೇಶಿತವಾಗಿದ್ದು ಸಂಪನ್ಮೂಲಗಳ ಯೋಜಿತ ಜೋಡಿಗಳನ್ನು ಬಳಸುತ್ತದೆ. ಇದು ಔಪಚಾರಿಕ ಮತ್ತು ಅನೌಪಚಾರಿಕ ಎರಡೂ ಸಂದರ್ಭಗಳಲ್ಲಿ ಘಟಿಸುತ್ತದೆ. ಈ ವಿಧಾನದ ಒಳಗೆ ಬಳಸಿದ ತಂತ್ರ ಎಂದರೆ ಅದು ವರ್ತನಾ ಮಾದರಿ (Behavioural model) (ಉದಾಹರಣೆಗೆ ಉತ್ತೇಜನ ಮತ್ತು ಬಲವರ್ಧನೆ). ಕೌಶಲಾರ್ಜನೆಯು ನಂತರ ನಿಧಾನಕ್ಕೆ ಕರಗಿಹೋಗುವ ತಂತ್ರ ಇದು. ಈ ಧ್ಯೇಯಗಳು ವಿದ್ಯಾರ್ಥಿ ಕೇಂದ್ರಿತವಾಗಿದ್ದು ವಾಸ್ತವ ನಿರೀಕ್ಷೆಗಳೊಂದಿಗೆ ಅವರ ಸಾಮರ್ಥ್ಯದ ಜೊತೆಗೆ ಸಂವಹನ ಮಾಡುತ್ತವೆ.



ತಂತ್ರಗಳು

ಶಾಲೆ

ನಮ್ಮ ಮುಖ್ಯ ಪಠ್ಯಕ್ರಮ ಕ್ರಿಯಾತ್ಮಕ ಶಿಕ್ಷಣದ ಜೊತೆಗೇ ಜೀವನ ಕೌಶಲಗಳು, ಚಲನಾ ಕೌಶಲಗಳು (MotorSkills), ಸಂವಹನ ಕೌಶಲಗಳು ಮತ್ತು ಸಾಮಾಜಿಕ ಕೌಶಲಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ. ವೃತ್ತಿಪರ ಕೌಶಲಗಳ ತರಬೇತಿ ಕೂಡಾ ಇರುತ್ತದೆ. ಇಲ್ಲಿ ಶಿಕ್ಷಕರು, ಸಹಪಾಠಿಗಳು ಮತ್ತು ಚಿಕಿತ್ಸಕರು ಭಾಗವಹಿಸುತ್ತಾರೆ.

ಕುಟುಂಬ

ಭಾವನಾತ್ಮಕ ನಿರ್ವಹಣೆಗೆ ನಾವು ಮುಖ್ಯವಾಗಿ ತಾಯಂದಿರಿಗೆ ವೈಯಕ್ತಿಕ ಸಮಾಲೋಚನೆ ತರಗತಿಗಳನ್ನು ನಡೆಸುತ್ತೇವೆ; ಬೇಷರತ್ ಸ್ವೀಕೃತಿಗಾಗಿ ಹೆತ್ತವರಿಗೆ ಸಮಾಲೋಚನೆ ; ಮೂರು ತಿಂಗಳಿಗೊಮ್ಮೆ ಒಡಹುಟ್ಟಿದವರಿಗೆ ಕಾರ್ಯಾಗಾರ; ಆರುತಿಂಗಳಿಗೊಮ್ಮೆ ಕುಟುಂಬದ ಸದಸ್ಯರಾದ ಅಜ್ಜಅಜ್ಜಿಯಂದಿರಿಗೆ ಹಾಗೂ ಇತರ ಮುಖ್ಯ ಸದಸ್ಯರಿಗೆ ಕಾರ್ಯಾಗಾರ ನಡೆಸುತ್ತೇವೆ.

ಸಮುದಾಯ

ವೈಕಲ್ಯವುಳ್ಳ ಮಕ್ಕಳ ಜವಾಬ್ದಾರಿಯು ಕೇವಲ ಆ ಕುಟುಂಬದ್ದು ಮಾತ್ರ ಅಲ್ಲ. ಅದು ಸಾಮಾಜಿಕ ಹೊಣೆಗಾರಿಕೆ ಎನ್ನುವುದನ್ನು ಸಾಮಾನ್ಯ ನಾಗರಿಕರಿಗೆ ಮನವರಿಕೆ ಮಾಡಿ ಸಂವೇದನಾಶೀಲರನ್ನಾಗಿಸುವುದು ಇಲ್ಲಿನ ಗುರಿ. ಕಾರ್ಪೋರೇಟ್ ಸಂಸ್ಥೆ, ಸಾರ್ವಜನಿಕ ಇಲಾಖೆ ಮತ್ತು ಮುಖ್ಯವಾಹಿನಿಯ ಶಾಲೆಗಳಿಗಾಗಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತೇವೆ.

ಮಂಡಲ ಪ್ರಕ್ರಿಯೆ

ಶಾಲೆ

ಜೀವನ ಕೌಶಲ, ಸಾಮಾಜಿಕ ಕೌಶಲ, ಸಂವಹನ ಕೌಶಲ, ನಿರ್ದಿಷ್ಟ ಕೌಶಲಗಳು ಮತ್ತುವೃತ್ತಿಪರ ಕೌಶಲಗಳಿಗೆ ತರಬೇತಿಗೊಳಿಸುವ ಧ್ಯೇಯಗಳನ್ನು ನಮ್ಮ ಪಠ್ಯಕ್ರಮವು ಒಳಗೊಂಡಿರುತ್ತವೆ.

• ಜೀವನ ಕೌಶಲ (ದಿನನಿತ್ಯ ಸ್ವತಂತ್ರವಾಗಿ ಬದುಕುವ ಕೌಶಲ)

ದಾಖಲಾತಿಯ ಸಂದರ್ಭದಲ್ಲಿ ಮಕ್ಕಳು ಆರ್ಜಿಸಿರುವ ದೈನಂದಿನ ಬದುಕಿನ ಕೌಶಲಗಳ ಮಟ್ಟವನ್ನು ಇದು ಅಳೆಯುತ್ತದೆ. ಶೌಚಾಲಯದ ತರಬೇತಿ, ಸ್ನಾನ, ವೈಯಕ್ತಿಕ ಸ್ವಚ್ಛತೆ, ಸ್ವತಂತ್ರವಾಗಿ ಆಹಾರ ಸೇವನೆಯ ಹವ್ಯಾಸ ಇವುಗಳ ಕಡೆಗೆ ಹೆಚ್ಚಿನ ಗಮನ ಕೇಂದ್ರೀಕರಿಸಲಾಗುತ್ತದೆ. ಮೂಲಭೂತ ಜೀವನ ಕೌಶಲಗಳಲ್ಲಿ ಮಕ್ಕಳನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ತರಬೇತುಗೊಳಿಸಬೇಕೆಂಬ ಮಹತ್ವವನ್ನು ಹೆತ್ತವರು ಅರ್ಥಮಾಡಿಕೊಳ್ಳುವುದಿಲ್ಲ ಎನ್ನುವುದನ್ನು ಗಮನಿಸಿದ್ದೇವೆ. ಹೆತ್ತವರು, ಒಂದೋ ಮಕ್ಕಳ ಸಾಮರ್ಥ್ಯವನ್ನು ಕಡೆಗಣಿಸಿರುತ್ತಾರೆ. ಇಲ್ಲವೇ ಅವರು ಅತಿಕಾಳಜಿ ವಹಿಸುವವರಾಗಿರುತ್ತಾರೆ ಮತ್ತು ಯಾವಾಗಲೂ ಅವರ ಕೆಲಸಗಳನ್ನು ಮಾಡಲು ತಯಾರಿರುತ್ತಾರೆ. ಮಕ್ಕಳಾಗಿ ಇದನ್ನೆಲ್ಲ ಮಾಡಿದರೆ ಯಾವುದೇ ತೊಂದರೆ ಇಲ್ಲ ಎಂದು, ಅದರಿಂದಾಗುವ ಪರಿಣಾಮಗಳನ್ನು ನಿರ್ಲಕ್ಷಿಸುತ್ತಾರೆ. ಇಂತಹ ಪ್ರಕರಣಗಳಲ್ಲಿ ಮುಖ್ಯ ಸವಾಲು ಎಂದರೆ ಇಂತಹ ಮಕ್ಕಳನ್ನು 'ಬೆಳೆಯಲು' ಬಿಡುವುದಿಲ್ಲ ಎನ್ನುವುದೇ ಆಗಿದೆ. ಉದಾಹರಣೆಗೆ ಬೆಳೆಯುವ ಮಕ್ಕಳಿಗೆ ಹೆತ್ತವರೇ ಸ್ನಾನ ಮಾಡಿಸುತ್ತಾರೆ. ಮಕ್ಕಳನ್ನು ಹೆತ್ತವರ ಜೊತೆಯಲ್ಲೇ ಮಲಗಿಸಿಕೊಳ್ಳುತ್ತಾರೆ. ಹಾಗಾಗಿ ಮಕ್ಕಳು 'ತಮ್ಮ ದೇಹ' ಎನ್ನುವ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಸೋಲುತ್ತಾರೆ. ಇದರಿಂದಾಗಿ ಮಕ್ಕಳಿಗೆ ಯಾವುದು ಒಳ್ಳೆಯ ಸ್ಪರ್ಶ ಮತ್ತು ಯಾವುದು ಕೆಟ್ಟ ಸ್ಪರ್ಶ ಎನ್ನುವುದರ ವ್ಯತ್ಯಾಸ ಕಂಡುಕೊಳ್ಳುವುದಕ್ಕಾಗದೇ ಅಪಾಯಕ್ಕೆ ಸಿಲುಕುತ್ತಾರೆ. ಇದು 'ವೈಯಕ್ತಿಕ ಸ್ಥಳ' (Personal space) ಪರಿಕಲ್ಪನೆಯ ತರಬೇತಿಗೆ ದೊಡ್ಡ ಅಡ್ಡಿಯಾಗಿ ಬಿಡುತ್ತದೆ. ಹದಿಹರೆಯಕ್ಕೆ ಕಾಲಿಡುವ ಮಕ್ಕಳು ತಮ್ಮದೇ ರಕ್ಷಣೆಗಾಗಿ ತಮ್ಮ ಸಾಮಾಜಿಕ ಸರಹದ್ದುಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಬೌದ್ಧಿಕ ನ್ಯೂನತೆ ಇರುವ ಮಕ್ಕಳಿಗೂ ಸಾಮಾನ್ಯರಂತೆಯೇ ದೈಹಿಕ ಮತ್ತು ಅದಕ್ಕೆ ಹೊಂದಿಕೊಂಡ ಲೈಂಗಿಕ ಬೆಳವಣಿಗೆಯಾಗುತ್ತದೆ. ಅದಕ್ಕಾಗಿ ಸಾಕಷ್ಟು ಪೂರ್ವಸಿದ್ಧತೆ ನಡೆಸಬೇಕು ಎನ್ನುವುದನ್ನು ಬಹುತೇಕ ಹೆತ್ತವರು ಅರ್ಥಮಾಡಿಕೊಳ್ಳುವಲ್ಲಿ ಸೋಲುತ್ತಾರೆ ಅಲ್ಲದೆ ಅನೇಕರಿಗೆ ಇದು ಪೂರ್ವಸಿದ್ಧತೆ ಇಲ್ಲದ ಸವಾಲು. ಮುಂದೆ ಹದಿಹರೆಯಕ್ಕೆ ಸಂಬಂಧಿಸಿದ ವರ್ತನಾ ಸಮಸ್ಯೆಗಳಿಗೆ (Behaviouralissues) ಕೂಡ ಇದು ದಾರಿ ಮಾಡಿಕೊಡುತ್ತದೆ. ಇದು ಹೆತ್ತವರು ಮತ್ತು ಮಕ್ಕಳು-ಇಬ್ಬರಿಗೂ ಸವಾಲಿನದ್ದು ಮತ್ತು ಹತಾಶೆಯದ್ದೂ ಆಗಬಹುದು. ಇವುಗಳ ಪರಿಹಾರಕ್ಕಾಗಿ, ವಿದ್ಯಾರ್ಥಿಯ ಶಾಲಾ ದಾಖಲಾತಿಯ ಸಂದರ್ಭದಲ್ಲಿ ಜೀವನಶೈಲಿಗೆ ಸಂಬಂಧಿಸಿದಂತೆ ಮೂರು ನೆಲೆಯ ಮಾಹಿತಿಗಳನ್ನು ಕಲೆಹಾಕಲಾಗುತ್ತದೆ; ಒಂದು ಹೆತ್ತವರಿಂದ, ಇನ್ನೊಂದು ಪ್ರಭಾರ ಶಿಕ್ಷಕರಿಂದ ಮತ್ತು ಕೊನೆಯದ್ದು, ನಿರ್ಣಾಯಕವಾದದ್ದು, ಮೊದಲ ಎರಡು ತಿಂಗಳ ನಂತರ ಶಾಲೆಯಲ್ಲೇ ಒಂದು 'ರಾತ್ರಿ ಪೂರ್ತಿ 'ಉಳಿಯುವ ಕಾರ್ಯಕ್ರಮ' ಇರುತ್ತದೆ. ಇದರಿಂದ ಮಕ್ಕಳ ಬಗ್ಗೆ ಅವರ ಶೌಚಾಲಯದ ಬಳಕೆ, ವೈಯಕ್ತಿಕ ಸ್ವಚ್ಛತೆ, ನಿತ್ಯ ಬದುಕಿನ ಕೌಶಲಗಳು, ಸಾಮರ್ಥ್ಯಗಳು, ಅದಕ್ಕೆ ಸಂಬಂಧಿಸಿದ ಅವಲಂಬನೆ ಮತ್ತು ಈ ವಿಷಯಗಳ ಬಗ್ಗೆ ಹೆತ್ತವರ ದೃಷ್ಟಿಕೋನದ ಬಗ್ಗೆ ನಮಗೆ ಸ್ಪಷ್ಟ ಚಿತ್ರಣ ಸಿಗುತ್ತದೆ. ಈ ಅವಲೋಕನವು ದೈನಂದಿನ ಬದುಕಿನ ಕೌಶಲಗಳಲ್ಲಿ ಐಇಪಿಯ (ವೈಯಕ್ತಿಕ ಶಿಕ್ಷಣ ಯೋಜನೆ) ಗುರಿಗಳನ್ನು ಸಾಧಿಸುವದಕ್ಕೆ ನೆರವಾಗುತ್ತದೆ ಇದು ಮಕ್ಕಳಿಗೆ ಮನೆಯಲ್ಲೇ ತರಬೇತಿ ನೀಡುವಂತೆ ಹೆತ್ತವರಲ್ಲಿ ಜಾಗೃತಿ ಮೂಡಿಸಲು ಮತ್ತು ಅವರನ್ನು ಭಾಗವಹಿಸುವಂತೆ ಮಾಡಲು ಅಗತ್ಯ. ಇದು ವ್ಯವಸ್ಥಿತ ಚಾಲನಾ ಕೌಶಲದ (Structured motor skills) ತರಬೇತಿ ಮತ್ತು ದೈಹಿಕ ಸ್ವಾಸ್ಥ್ಯ, ಮಾಂಸಖಂಡಗಳ ಸಂಯೋಜನೆ (Muscle coordination) ಮತ್ತು ದೈಹಿಕ ಸಾಮರ್ಥ್ಯಗಳನ್ನು ಅಳೆಯಲು ಜೊತೆಗೆ ದಿನ ನಿತ್ಯದ ಮನೆಗೆಲಸ ಮತ್ತು ವೈಯಕ್ತಿಕ ಕಾಳಜಿಗಳನ್ನು ಒಳಗೊಂಡಿರುತ್ತದೆ.

- ಸಾಮಾಜಿಕ ಕೌಶಲಗಳು: ಬೌದ್ಧಿಕ ನ್ಯೂನತೆ ಇರುವ ಮಕ್ಕಳು ಸಾಮಾಜಿಕ ಕೌಶಲ ಕಲಿಯುವುದರಲ್ಲಿ, ಅವುಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಅನ್ವಯಿಸುವುದರಲ್ಲಿ ಸಮಸ್ಯೆಗಳನ್ನು ಎದುರಿಸುತ್ತಾರೆ. ಇದನ್ನೆಲ್ಲ ಕಲಿಯುವುದಕ್ಕೆ, ತಮ್ಮದಾಗಿಸಿಕೊಳ್ಳುವುದಕ್ಕೆ ಸಾಕಷ್ಟು ತರಬೇತಿಯ ಅಗತ್ಯವಿರುತ್ತದೆ. ವಿವಿಧ ಸಾಮಾಜಿಕ ಸನ್ನಿವೇಶಗಳಲ್ಲಿ ಮಕ್ಕಳನ್ನು ಇರಿಸಿ ಅವರಿಗೆ ಈ ತರಬೇತಿಯನ್ನು ನೀಡಲಾಗುತ್ತದೆ. ಮನೆಗೆ ಭೇಟಿ ನೀಡುವುದರಿಂದ ಹಿಡಿದು, ಸಾಮಾಜಿಕ ಕಾರ್ಯಕ್ರಮ, ಮಾಲ್, ಸಾರ್ವಜನಿಕ ಸೇವೆಯ ಕಚೇರಿಗಳು, ಅಲ್ಪಾವಧಿ (ಎರಡು ರಾತ್ರಿ), ದೀರ್ಘಾವಧಿಯ (ಏಳು ರಾತ್ರಿ) ಶಿಕ್ಷಣ ಪ್ರವಾಸಗಳೆಲ್ಲ ಈ ತರಬೇತಿಯಲ್ಲಿ ಒಳಗೊಂಡಿರುತ್ತವೆ ಈ ಇಲ್ಲಿ ಅವಲೋಕಿಸಿದ ಅವರ ಸಂವಹನ ಮತ್ತು ವರ್ತನೆಯ ಶೈಲಿಗಳ ಆಧಾರದಲ್ಲಿ ಸಾಮಾಜಿಕ ಕೌಶಲಗಳ ನೆಲೆಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳಲಾಗುತ್ತದೆ. ಅದಕ್ಕೆ ಅನುಗುಣವಾಗಿ ವೈಯಕ್ತಿಕ ಕೌಶಲ ಅಭಿವೃದ್ಧಿ, ಸಾಮಾಜಿಕ ಕೌಶಲಗಳ ಕೊರತೆ, ಆಧಿಕ್ಯ, ಸಾಮಾಜಿಕ ವಿಚಿತ್ರ ನಡವಳಿಕೆ ಮತ್ತು ಐಇಪಿಗಳನ್ನು (ವೈಯಕ್ತಿಕ ಶಿಕ್ಷಣ ಯೋಜನೆ) ಯೋಜಿಸಲಾಗುತ್ತದೆ. ಸಂವಹನ ಕೌಶಲಗಳು: ಉತ್ತಮ ಸಾಮಾಜಿಕ ಬಾಂಧವ್ಯಕ್ಕಾಗಿ ಅವಶ್ಯಕತೆಗೆ ತಕ್ಕಂತೆ ಅಭಿವ್ಯಕ್ತಿಶೀಲ ಮತ್ತು ಸಂದರ್ಭಾನುಸಾರ ಸಂಭಾಷಣೆಗಳ ಬೆಳವಣಿಗೆಗೆ ಮುಖ್ಯಗಮನ ನೀಡಲಾಗುವುದು.

ವೈಯಕ್ತಿಕವಾಗಿ ಮತ್ತು ದೂರವಾಣಿ ಮೂಲಕ ಇಡೀ ದಿನ ಮಕ್ಕಳ ಭಾಗವಹಿಸುವಿಕೆ ಹೆಚ್ಚಿಸಲು ಅವಕಾಶ ಆಧಾರಿತ ಯೋಜನೆಯನ್ನು

ವಿನ್ಯಾಸಗೊಳಿಸಲಾಗುತ್ತದೆ. ಶಾಲೆಗಳಲ್ಲಿ ಮತ್ತು ಕುಟುಂಬಗಳಲ್ಲಿ ಮೊದಲಿಗೆ ಇಂತಹ ಅವಕಾಶಗಳನ್ನು ಸೃಷ್ಟಿಸಲಾಗುತ್ತದೆ ಅನಂತರ ಅದನ್ನು ಸಾಮಾಜಿಕ ಸನ್ನಿವೇಶಗಳಿಗೆ ವಿಸ್ತರಿಸಲಾಗುತ್ತದೆ. ಮಾತು ಬಾರದ ಮಕ್ಕಳಿಗೆ ಸಂಬಂಧಿಸಿದಂತೆ ಮೊದಲು ಶಿಕ್ಷಕರು ಸಂವಹನ ತಿಳಿಸುವ ಅವರ ವರ್ತನೆಯನ್ನು ಗುರುತಿಸಿ ಮೌಲ್ಯಮಾಪನ ಮಾಡುತ್ತಾರೆ. ಮಕ್ಕಳನ್ನು ಇನ್ನಷ್ಟು ಚೆನ್ನಾಗಿ ಅರ್ಥ–ಮಾಡಿಕೊಳ್ಳುವುದಕ್ಕಾಗಿ, ವಿವಿಧ ಭಾವನೆಗಳನ್ನು / ಅಗತ್ಯಗಳನ್ನು ತಿಳಿಸಲು ವ್ಯಕ್ತಪಡಿಸುವ ಇತರ ಸಾಮಾನ್ಯ ವರ್ತನೆಗಳ ಬಗೆಗೂ ಹೆತ್ತವರಿಂದ ಮಾಹಿತಿ ಪಡೆಯಲಾಗುತ್ತದೆ. ವರ್ತನಾ ಪ್ರತಿಸ್ಪಂದನೆಯ (Behavioural intervention) ಗುರಿಗಳ ಒಳನೋಟ ಪಡೆಯಲು ವರ್ತನೆಯ ಕ್ರಿಯಾತ್ಮಕ ವಿಶ್ಲೇಷಣೆ (Functional analysis of behavior) (ಹಿಂದಿನ–ವರ್ತನೆ–ಪರಿಣಾಮ) ಯನ್ನು ಮಾಡಲಾಗುತ್ತದೆ. ಉದಾಹರಣೆಗೆ ಹಸಿವಾದಾಗ ಎಸೆಯುವ ತಂತ್ರ, ಕೆಲಸ ತಪ್ಪಿಸಲು ಓಡುವ ತಂತ್ರ – ಇತ್ಯಾದಿಗಳ ವಿಶ್ಲೇಷಣೆ ಮಾಡಲಾಗುತ್ತದೆ. ಈ ತಂತ್ರಗಳಿಗೆ ಪರ್ಯಾಯವಾಗಿ ಮನೆಯಲ್ಲೇ ಬಳಸುವ ಸಂಜ್ಞೆ/ಸಂಕೇತ ಭಾಷೆಯ ಬಗೆಗೆ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ನಾವು ಹೆತ್ತವರಿಗೂ ಸಂಕೇತ ಭಾಷೆಯ ಕಾರ್ಯಾಗಾರ ನಡೆಸುತ್ತೇವೆ. ಇದರಿಂದ ಮಗುವಿಗೆ ಶಾಲೆ ಮತ್ತು ಕುಟುಂಬದ ಸಂವಹನದಲ್ಲಿ ಯಾವುದೇ ವ್ಯತ್ಯಾಸ ಕಾಣಿಸುವುದಿಲ್ಲ.

- ಕ್ರಿಯಾತ್ಮಕ ಶಿಕ್ಷಣ: ಒಮ್ಮೆ ಈ ಮೂಲಕೌಶಲಗಳನ್ನು ಗಳಿಸಿದ ನಂತರ, ಕ್ರಿಯಾತ್ಮಕ ಶಿಕ್ಷಣ ತರಬೇತಿ ಶುರುವಾಗುತ್ತದೆ. ಇದರಲ್ಲಿ ಸಮಯ, ಹಣ, ಕ್ಯಾಲೆಂಡರ್ ಓದು, ಮುಖ್ಯ ಸ್ಥಳಗಳು, ಪ್ರದೇಶಗಳ ಗುರುತಿಸುವಿಕೆ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ನಿಜ ಬದುಕಿನ ಸನ್ನಿವೇಶಗಳಿಗೆ ಅವರು ತೆರೆದುಕೊಳ್ಳುವಂತೆ ಮಾಡಿ ಪ್ರಾಯೋಗಿಕ ನೆಲೆಯಲ್ಲೇ ಅವುಗಳನ್ನು ಅಭ್ಯಾಸ ಮಾಡಿಸಲಾಗುತ್ತದೆ. ತರಬೇತಿಯು ಮೂಲ ವಿಚಾರಗಳೊಂದಿಗೆ ಆರಂಭ ಆಗುತ್ತದೆ. ಸಮಯಕ್ಕೆ ಸಂಬಂಧಿಸಿದ ಚಟುವಟಿಕೆಗಳ ಪರಿಕಲ್ಪನೆಗಳನ್ನು ಅರ್ಥೈಸುವುದಕ್ಕೆ ಹೇಳಿಕೊಡಲಾಗುತ್ತದೆ. ಅದೇ ರೀತಿ ಬೇಗ ಮತ್ತು ವಿಳಂಬ, ಕಡಿಮೆ ಮತ್ತು ಹೆಚ್ಚು ಇಂತಹ ಪರಿಕಲ್ಪನೆಗಳನ್ನು ತಿಳಿಸಲಾಗುತ್ತದೆ. ಕ್ರಮೇಣ ದೈನಂದಿನ ಬದುಕಿಗೆ ಬೇಕಾದ ಉನ್ನತ ಮಟ್ಟದ ಪರಿಕಲ್ಪನೆಗಳನ್ನು ಗಳಿಸುವಂತೆ ಮಾಡಲಾಗುತ್ತದೆ.

- ಕೌಶಲ ತರಬೇತಿ: ಈ ಮೇಲಿನ ಸ್ವತಂತ್ರ ಜೀವನಕ್ಕೆ ಬೇಕಾದ ಮೂಲಭೂತ ಕೌಶಲಗಳ ತರಬೇತಿ ಪಡೆದ ನಂತರ, ಮನೆ ನಿರ್ವಹಣೆಯ ತರಬೇತಿ, ವಿದ್ಯಾರ್ಥಿಗಳಿಗೆ ಸೂಕ್ತವಾದ ವೃತ್ತಿಪರ ತರಬೇತಿಗಳನ್ನು ಆರಂಭಿಸಲಾಗುತ್ತದೆ. ಇದೂ ಕೂಡ ತಮ್ಮನ್ನು ತಾವು ಅಂದಗೊಳಿಸುವುದು, ಮನೆ ನಿರ್ವಹಣೆ ಕೌಶಲ, ಕುಟುಂಬದ ಒಳಗೆ ಮತ್ತು ಹೊರಗೆ ಅಂತರ್‌ವ್ಯಕ್ತಿ ಸಂಬಂಧ ಕೌಶಲ, ನೆರೆಹೊರೆಯವರ ಪರಿಚಯ, ಸ್ವತಂತ್ರ ಪ್ರಯಾಣದ ಕೌಶಲ ಮತ್ತು ಕೊನೆಗೆ ನಿರ್ದಿಷ್ಟ ಸ್ಥಳದಲ್ಲಿಯೇ ಕೌಶಲ ತರಬೇತಿಗಳನ್ನು ಒಳಗೊಂಡಿರುತ್ತವೆ. ಕುಟುಂಬ.

- ವಿಶೇಷ ಅಗತ್ಯವುಳ್ಳ ಮಗುವಿನ ಬೆಳವಣಿಗೆ ಮತ್ತು ವ್ಯಕ್ತಿತ್ವ ರೂಪುಗೊಳ್ಳುವಲ್ಲಿ, ಅದು ಸ್ವತಂತ್ರವಾಗಿ ಕಾರ್ಯ–ನಿರ್ವಹಿಸುವಂತೆ ಮಾಡುವಲ್ಲಿ ಕುಟುಂಬವು ಅತ್ಯಂತ ಪ್ರಬಲ ಮತ್ತು ಮುಖ್ಯ ಭಾವನಾತ್ಮಕ ಒತ್ತಾಸೆಯ ವ್ಯವಸ್ಥೆಯಾಗಿ ಕೆಲಸ ಮಾಡುತ್ತದೆ. ಕುಟುಂಬಗಳು ಭಾಗಿಯಾದಾಗ ಅತ್ಯುತ್ತಮ ಫಲಿತಾಂಶ ಬರುವುದನ್ನು ನೋಡಿದ್ದೇವೆ. ಮಕ್ಕಳ ಸಬಲೀಕರಣಕ್ಕೆ ಬೇಕಾದ ವೈಯಕ್ತಿಕ ಮತ್ತು ವೃತ್ತಿಪರ ತರಬೇತಿಗೆ ಹೆತ್ತವರ ಕನಸುಗಳು, ಪ್ರಯತ್ನಗಳು, ನಡವಳಿಕೆಗಳೇ ಆಧಾರ.

ಮಕ್ಕಳನ್ನು ಬೆಚ್ಚಗಿನ ಪ್ರೋತ್ಸಾಹದಾಯಕ ವಾತಾವರಣದಲ್ಲಿ ಪೋಷಿಸುವುದು ಅಗತ್ಯ. ಉತ್ತಮ ಸಕಾರಾತ್ಮಕ ಪಾಲಕತ್ವ (Parenting) ಅವರಿಗೆ ಬೇಕು. ಮಕ್ಕಳನ್ನು ಒಪ್ಪಿಕೊಂಡು ಗೌರವಿಸುವುದು, ಹೆತ್ತವರು ಮತ್ತು ಕುಟುಂಬದ ಇತರ ಸದಸ್ಯರು ನಿರಂತರವಾಗಿ ಅವರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮುಖ್ಯ. ಪಾಲಕರಿಗೆ ಅದರಲ್ಲೂ ತಾಯಂದಿರಿಗೆ ಸಂಬಂಧಿಸಿದಂತೆ ಇದು ದೊಡ್ಡ ಸವಾಲಿನ ಮತ್ತು ಚೈತನ್ಯ ಬೇಡುವ ಚಟುವಟಿಕೆ. ಹಾಗಾಗಿ ಮಗುವಿನ ಸಾಮರ್ಥ್ಯ, ಮಿತಿ ಮತ್ತು ವೈಯಕ್ತಿಕ ಭಾವನೆಗಳ ನಿರ್ವಹಣೆಗಾಗಿ ಹೆತ್ತವರಿಬ್ಬರಲ್ಲೂ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ನಿಯತವಾಗಿ ಒಬ್ಬರ ನಂತರ ಒಬ್ಬರಿಗೆ ಎಂಬಂತೆ ಸಮಾಲೋಚನೆಯ ತರಗತಿಗಳನ್ನು ನಡೆಸಲಾಗುತ್ತದೆ. ಪೋಷಕರಿಗೆ, ಆಧ್ಯಾತ್ಮಿಕವಾಗಿ ಶಮನ ನೀಡುವ ಕಾರ್ಯಾ–ಗಾರಗಳು, ಕಲಾ ಆಧಾರಿತ ಚಿಕಿತ್ಸೆಗಳ ಮೂಲಕ ಆತ್ಮಾವಲೋಕನ, ಚಲನೆಯ ಚಿಕಿತ್ಸೆ, ಯೋಗ ಚಿಕಿತ್ಸೆ ಮತ್ತು ಕೌಟುಂಬಿಕ ಬಾಂಧವ್ಯ ದಿನ ಮುಂತಾದವುಗಳ ಮೂಲಕ ಸಬಲೀಕರಣಗೊಳಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಆನಂತರ ಒಡಹುಟ್ಟಿದವರಿಗೆ, ಮತ್ತು ವಿಸ್ತರಿತ ಕುಟುಂಬದ ಇತರ ಸದಸ್ಯರಿಗೆ ಕಾರ್ಯಾಗಾರಗಳು ಜರುಗುತ್ತವೆ. ಮಕ್ಕಳನ್ನು ಒಪ್ಪಿಕೊಳ್ಳುವುದಕ್ಕೆ ಮತ್ತು ಕೌಟುಂಬಿಕವಾಗಿ ಮಗುವನ್ನು ತೊಡಗಿಸಿಕೊಳ್ಳಲು ಇಂತಹ ಕಾರ್ಯಾಗಾರಗಳು ಬೇಕಾಗುತ್ತವೆ. ವಿಸ್ತೃತ ನೆಲೆಯಲ್ಲಿ ಇದು ಬಹುತೇಕ ತಾಯಂದಿರ ಮೇಲಿನ ಒತ್ತಡವನ್ನು ತಗ್ಗಿಸುತ್ತದೆ.

ಸಮುದಾಯ

ಬೌದ್ಧಿಕ ನ್ಯೂನತೆ ಇರುವ ಮಕ್ಕಳು ಮತ್ತು ಅವರ ಕುಟುಂಬಗಳ ಬದುಕಿನ ಸಮಗ್ರ ಸಿದ್ಧತೆ ಮತ್ತು ಗುಣಮಟ್ಟದ ಜೀವನದಲ್ಲಿ ಸಮುದಾಯ ಮುಖ್ಯ ಪಾತ್ರವನ್ನು ವಹಿಸುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ. ದುರ–ದೃಷ್ಟವಶಾತ್ ಸಾಮಾಜಿಕ ಕಳಂಕ, ಜಾಗೃತಿಯ ಕೊರತೆ, ನಕಾರಾತ್ಮಕ ಪ್ರವೃತ್ತಿ, ಹೇಗೆ ಸಹಾಯ ಮಾಡಬಹುದು, ಒಳಗೊಳ್ಳಿಸಬಹುದು ಎನ್ನುವುದಕ್ಕಿಂತ ವಿಕಲತೆಯ ಮತ್ತು ಮಗು ಏನು ಮಾಡಲಾರದು ಎನ್ನುವುದರ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸುವ ಸಮಾಜ, ತಾನು ಹೇಗೆ ಮಗುವನ್ನು ತಲುಪಲು ಸಾಧ್ಯ ಎಂಬಲ್ಲಿ ಸಾಮಾಜಿಕ ಜವಾಬ್ದಾರಿ ತೋರಬೇಕಾಗಿರುವುದನ್ನುನ್ನು ಅಲ್ಲ–ಗೆಳೆಯುವುದು ಸಾಧ್ಯವಿಲ್ಲ. ಇದಕ್ಕೆ ಇರುವ ಪರಿಹಾರ ಎಂದರೆ ಸೂಕ್ತ ಸಾರ್ವಜನಿಕ ಶಿಕ್ಷಣ ಮತ್ತು ನೆರೆಹೊರೆಯನ್ನು ಇದಕ್ಕಾಗಿ ಸೂಕ್ಷ್ಮಮತಿಗಳಾಗಿಸುವ ಕಾರ್ಯಕ್ರಮಗಳು. ಹೀಗಾಗಿ ಕಾರ್ಪೋರೇಟ್ ಸಂಸ್ಥೆಗಳ, ಸಾರ್ವಜನಿಕ ಸೇವಾ ಇಲಾಖೆಗಳ ಮತ್ತು ಮುಖ್ಯವಾಹಿನಿಯ ಶಾಲೆಗಳ, ನಿವಾಸಿಗಳ ಅಭಿವೃದ್ಧಿ ಸಂಘಗಳ, ಸಾರಿಗೆ ಸಿಬ್ಬಂದಿಯ ಸಹಕಾರದೊಂದಿಗೆ ನಿಯತವಾಗಿ ಸಂವಾದಗಳನ್ನು ಸಂಯೋಜಿಸಿ ಆರಂಭಿಸಲಾಗಿದೆ. ಪ್ರತಿಯೊಬ್ಬರೂ ಅನುಕಂಪ ಮತ್ತು ತೀರ್ಪು ನೀಡುವ ಸ್ಥಿತಿಗಿಂತ ಅನುಭೂತಿಯ ಮತ್ತು ಬೆಂಬಲ ನೀಡುವ ಸ್ಥಿತಿಯಲಿರಬೇಕು ಎಂದು ಅರ್ಥಮಾಡಿಕೊಳ್ಳಲು ಈಸಂವಾದಗಳು ಸಹಾಯಕ. ಮಕ್ಕಳನ್ನು ತರಕಾರಿ ಮಾರುಕಟ್ಟೆ, ಮಾಲ್, ಹಾಲಿನ ಅಂಗಡಿ, ರೈಲ್ವೇ ನಿಲ್ದಾಣ, ಅಂಚೆಕಚೇರಿ, ಔಷಧ ಅಂಗಡಿಗಳಿಗೆ ಸಂವಾದಕ್ಕಾಗಿ ಮತ್ತು ಖರೀದಿ ಮಾಡುವುದಕ್ಕಾಗಿ ಕರೆದೊಯ್ಯಲಾಗುತ್ತದೆ. ಸೇವಾ ಪೂರೈಕೆದಾರರಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ಸಮಸ್ಯೆಗಳ ಬಗೆಗೆ ಜಾಗೃತಿ ಮೂಡಿಸುವುದಕ್ಕೆ

ಇಂತಹ ಅವಕಾಶ ಕಲ್ಪಿಸಲಾಗುತ್ತದೆ. ಈ ಮಕ್ಕಳನ್ನು ನಾವು ಯಾಕೆ ಮತ್ತು ಹೇಗೆ ತೊಡಗಿಸಿಕೊಳ್ಳಬೇಕು ಎಂದು ಅರ್ಥೈಸುವುದಕ್ಕೆ ಇದು ದಾರಿ ಮಾಡಿಕೊಡುತ್ತದೆ.

'ಮಂಡಲ' ಕಾರ್ಯಕ್ರಮದ ವಿಶ್ಲೇಷಣೆ ಮತ್ತು ಫಲಿತಾಂಶ



ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ/ತರಬೇತಿಗಳಲ್ಲಿ ಶಾಲೆ, ಕುಟುಂಬ ಮತ್ತು ಸಮುದಾಯದ ಕೊಡುಗೆ ಏನು ಎನ್ನುವುದನ್ನು ಮುಂದೆ ನೀಡಲಾದ ಕೋಷ್ಟಕ ಬಹಳ ಸ್ಪಷ್ಟವಾಗಿ ತೋರಿಸಿಕೊಡುತ್ತದೆ.

ಪ್ರತಿಯೊಬ್ಬ ವಿಶೇಷ ಅಗತ್ಯವುಳ್ಳ ಮಗುವಿನ ಶಿಕ್ಷಣದ ಮೂರು ಮುಖ್ಯ ಅಂತಿಮ ಗುರಿಗಳಿಗೆ–ಸ್ವತಂತ್ರ ಬದುಕಿನ ಕೌಶಲಗಳು, ಉದ್ಯೋಗಾರ್ಹತೆ ಮತ್ತು ಒಳಗೊಳ್ಳುವಿಕೆ ಸಂಬಂಧಿಸಿದ ಅನುಕ್ರಮ ಸಾಧನೆ ಈ ಕೋಷ್ಟಕದಲ್ಲಿದೆ. ಹೀಗೆ ಬೌದ್ಧಿಕ ನ್ಯೂನತೆ ಇರುವ ವಿದ್ಯಾರ್ಥಿಗಳ ಆದರ್ಶ ಶಿಕ್ಷಣವು ಶಾಲೆಗಳ ಜೊತೆಗೆ ಕುಟುಂಬಗಳು ಸೇರಿಕೊಳ್ಳುವುದರಿಂದ ಮತ್ತು ಅದೇ ಹೊತ್ತಿಗೆ ಸಮಾಜವನ್ನು ಸಂವೇದನಾಶೀಲಗೊಳಿಸುವುದರಿಂದ ಆರಂಭಗೊಳ್ಳುತ್ತದೆ. ಈ ಧೋರಣೆಯು ಶಾಲೆ ಮತ್ತು ಕುಟುಂಬ ಪರಿಸರದಿಂದ ಸಮುದಾಯದಲ್ಲಿ ಗೌರವದಿಂದ ಬದುಕುವ ಕಡೆಗೆ ಈ ಮಕ್ಕಳನ್ನು ಸರಿಯಾದ ಮತ್ತು ಸರಳವಾದ ಚಲನೆಗೆ ಸುಗಮಗೊಳಿಸುತ್ತದೆ.

ಉಷಾ ಮದನ್, ಎಂಎಸ್ಸಿ (ಜೆನೆಟಿಕ್ಸ್), ಡಿಸಿಎಸ್, ಎಂ.ಎಸ್. (ಮನೋಚಿಕಿತ್ಸೆ + ಸಮಾಲೋಚನೆ), ಅವರು ದೀಪಿಕಾ ವಿಶೇಷ ಶಾಲೆಯಲ್ಲಿ ಸಾರ್ವಜನಿಕ ಸಂಪರ್ಕ ಅಧಿಕಾರಿ ಮತ್ತು ಸಮಾಲೋಚನಾ ಸಂಯೋಜಕಿಯಾಗಿ 2007ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಅದಕ್ಕೂ ಮುನ್ನ ಅವರು ಪ್ರಮೇಯಾ ಹೆಲ್ತ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸಲಹಾ ಮನೋಚಿಕಿತ್ಸಕಿಯಾಗಿ ದುಡಿದಿದ್ದಾರೆ. ಬೆಂಗಳೂರಿನ ಐಆರ್‌ಸಿಯಲ್ಲಿ ಸಂಪನ್ಮೂಲ ಸಿಬ್ಬಂದಿಯಾಗಿ ದುಡಿದಿದ್ದಾರೆ. ಬೆಂಗಳೂರಿನ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಪಾಲಕರ ಕಾರ್ಯಾಗಾರಗಳಲ್ಲಿ ಬೋಧಕರಾಗಿ ಕೆಲಸ ಮಾಡಿದ್ದಾರೆ. ಗಿವ್ ಇಂಡಿಯಾ ಫೋರ್ ವಾಯ್ಸ್‌ಲೆಸ್‌ನ ಸ್ಥಾಪಕ ಧರ್ಮದರ್ಶಿಯೂ ಆಗಿದ್ದಾರೆ. ಅವರನ್ನು ushamadan2@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಬಾಲಕೃಷ್ಣ ಹೊಸಂಗಡಿ** । ಪರಿಶೀಲನೆ: **ನಾಗಮಣಿ ಎಸ್ ಎನ್**